ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೯ Volume 149	ಬೆಂಗಳೂರು, ಗುರುವಾರ, ಮಾರ್ಚ್ ೧೩, ೨೦೧೪ (ಫಾಲ್ಗುಣ ೨೨, ಶಕ ವರ್ಷ ೧೯೩೫) Bangalore, Thursday, March 13, 2014 (Phalguna 22, Shaka Varsha 1935)	ಸಂಚಿಕೆ ೧೧ Issue 11

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಕಂದಾಯ ಸಚಿವಾಲಯ

ನಮೂನೆ-29

68ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗಿನ ಘೋಷಣೆ-ನಿಯಮ 96.

ಅಧಿಸೂಚನೆ

ಸಂಖ್ಯೆ : ಆರ್‌ಡಿ 36 ಎಲ್‌ಜಿವೈ 2013, ಬೆಂಗಳೂರು, ದಿನಾಂಕ: 16ನೇ ಜನವರಿ, 2014

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (5)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು ತಮ್ಮ ನೋಟೀಸಿನ ಸಂಖ್ಯೆ: ಎಲ್.ಎನ್.ಡಿ. (1)64/2010-11, ದಿನಾಂಕ: 23-07-2012ರಂತೆ ಈ ಕೆಳಕಂಡ ಸ್ವತ್ತಿನ ಭಾಗವು ಸಾರ್ವಜನಿಕರಿಗೆ ಅಗತ್ಯವಿಲ್ಲವೆಂದು, ಸದರಿ ಸ್ವತ್ತಿನ ಭಾಗದಲ್ಲಿ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳುತ್ತದೆಂದು ಪ್ರಕಟಣೆಯಲ್ಲಿ ಹೊರಡಿಸಿದ್ದು, 90 (ತೊಂಬತ್ತು) ದಿನಗಳು ಕಳೆದರೂ, ಸದರಿ ಸ್ವತ್ತಿನ ಹಕ್ಕಿನ ಸ್ವರೂಪದ, ಪ್ರತಿಕೂಲ ಪರಿಣಾಮದ ಮತ್ತು ನಷ್ಟದ ಪರಿಹಾರದ ಕ್ಲೇಮುಗಳ ಬಗ್ಗೆ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ. ಈ ಕುರಿತು ಜಿಲ್ಲಾಧಿಕಾರಿಗಳು, ಮಂಡ್ಯ ರವರ ವಿವರ ವರದಿಯನ್ನು ಪರಿಗಣಿಸಿ ರಾಜ್ಯ ಸರ್ಕಾರಕ್ಕೆ ಈ ಸ್ವತ್ತು ಸಾರ್ವಜನಿಕ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮನಗಂಡು, ಈ ಸ್ವತ್ತಿನ ಮೇಲಿನ ಎಲ್ಲಾ ಹಕ್ಕುಗಳು ಅಳಿದುಹೋಗತಕ್ಕದ್ದು ಎಂದು ಘೋಷಿಸಿದೆ. ಹಾಗೂ ಈ ಸ್ವತ್ತನ್ನು ರಾಜ್ಯ ಸರ್ಕಾರವು ವಿಲೇ ಮಾಡುವ ಅಧಿಕಾರಕ್ಕೆ ಒಳಪಡುತ್ತದೆ ಎಂದು ತಿಳಿಯಪಡಿಸಿದೆ.

ಅನುಸೂಚಿ

ಗ್ರಾಮ	**ನಾಗಮಂಗಲ**
ತಾಲ್ಲೂಕು	**ನಾಗಮಂಗಲ**
ಜಿಲ್ಲೆ	**ಮಂಡ್ಯ**
ರಸ್ತೆ ಮೊದಲಾದುದರ ಭಾಗದ ವರ್ಣನೆ	**ಸ.ನಂ. 298/1ಬಿ, ಸರ್ಕಾರಿ ಖರಾಬು**
ವಿಸ್ತೀರ್ಣ	**0-10**
ಪೂರ್ವಕ್ಕೆ :	**ಸ.ನಂ. 298/1ಬಿರ ಉಳಿಕೆ ಜಮೀನು**
ಪಶ್ಚಿಮಕ್ಕೆ :	**ಸ.ನಂ. 297ರ ಜಮೀನು**
ಉತ್ತರಕ್ಕೆ :	**ಓಣಿ ಮತ್ತು ಉಪ್ಪಾರಹಳ್ಳಿ ಗಡಿ**
ದಕ್ಷಿಣಕ್ಕೆ :	**ಸ.ನಂ. 298/1ಬಿರ ಉಳಿಕೆ ಜಮೀನು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಶಿವಪ್ರಕಾಶ,

ಪೀಠಾಧಿಕಾರಿ (ಪ್ರ),

ಕಂದಾಯ ಇಲಾಖೆ (ಭೂ ಮಂಜೂರಾತಿ-2).

PR. 76

SC 50

ತಹಶೀಲ್ದಾರ್‌ರವರ ಕಾರ್ಯಾಲಯ

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ, ಬೆಂಗಳೂರು

ಕಡತ ಸಂಖ್ಯೆ: ಎಲ್.ಎನ್.ಡಿ. (ಎನ್.ಎ)/ಸಿಆರ್/1247/11–12, ದಿನಾಂಕ: 27ನೇ ಡಿಸೆಂಬರ್, 2013

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 68(1)ನೇ ಪ್ರಕರಣದ ಮೇರೆಗಿನ ಘೋಷಣೆ

ಪ್ರಕಟಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ 'ಬಿ' ಖರಾಬು ಜಮೀನು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದಿರುವುದರಿಂದ,

1. ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 'ಬಿ' ಖರಾಬು ಜಮೀನಿನ ಸದರಿ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮತ್ತು ಸಾರ್ವಜನಿಕ 'ಬಿ' ಖರಾಬು ಜಮೀನಿನ ಸದರಿ ಭಾಗದಲ್ಲಿ ಅಥವಾ ಅದರ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕುದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.
2. ಸಾರ್ವಜನಿಕ ಹೆದ್ದಾರಿಯ ಹಕ್ಕಿನ ಜೊತೆಗೆ ಸದರಿ ರಸ್ತೆಯ ಸದರಿ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು, ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂಥ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂಥ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೇಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಡೆಪ್ಯುಟಿ ಕಮೀಷನವರಿಗೆ ಅಥವಾ ತಾಲ್ಲೂಕು ತಹಶೀಲ್ದಾರ್ ರವರಿಗೆ ಬರಹದಲ್ಲಿ ತಿಳಿಸತಕ್ಕದ್ದು. ಮತ್ತು ಸದರಿ ಆಕ್ಷೇಪಣೆಗಳನ್ನು ಮತ್ತು ಕ್ಲೇಮುಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಡೆಪ್ಯುಟಿ ಕಮೀಷನರು ಅಥವಾ ತಾಲ್ಲೂಕ್ ತಹಶೀಲ್ದಾರ್ ರವರಿಗೆ ಪರಿಶೀಲಿಸತಕ್ಕದ್ದು.

: ಅನುಸೂಚಿ :

ರಸ್ತೆಯ ಭಾಗ ಇತ್ಯಾದಿ ಇರುವ ಗ್ರಾಮಗಳು	**ಅರಕೆರೆ**
ತಾಲ್ಲೂಕುಗಳು	**ಬೆಂಗಳೂರು ಉತ್ತರ (ಅಪರ) ತಾಲ್ಲೂಕು**
ಜಿಲ್ಲೆ	**ಬೆಂಗಳೂರು ನಗರ ಜಿಲ್ಲೆ**
ರಸ್ತೆಯ ಮೊದಲಾದುದರ ಭಾಗ ಅಥವಾ ಭಾಗಗಳ ವರ್ಣನೆ	**ಸರ್ವೆ ನಂ. 118ರಲ್ಲಿ 2.00 ಎಕರೆ**
ರಸ್ತೆಯ ಭಾಗ ಅಥವಾ ಭಾಗಗಳ ಸರಿ ಸುಮಾರು ವಿಸ್ತೀರ್ಣ	**2.00 ಎಕರೆ**
ಮೇರೆ	**ಪೂರ್ವಕ್ಕೆ : ರಸ್ತೆ** **ಪಶ್ಚಿಮಕ್ಕೆ : ಸ.ನಂ. 118ರ ಉಳಿಕೆ ಜಮೀನು** **ಉತ್ತರಕ್ಕೆ : ಸ.ನಂ. 118ರ ಉಳಿಕೆ ಜಮೀನು** **ದಕ್ಷಿಣಕ್ಕೆ : ಸ.ನಂ. 118ರ ಉಳಿಕೆ ಜಮೀನು**
ಸಾರ್ವಜನಿಕ ರಸ್ತೆ/ ಬೀದಿ/ ಗಲ್ಲಿ/ದಾರಿ ಅಥವಾ ಅದರ ಭಾಗ	**ಸರ್ವೆ ನಂ. 118ರಲ್ಲಿ 2.00 ಎಕರೆ**

ತಹಶೀಲ್ದಾರ್,
ಬೆಂಗಳೂರು ಉತ್ತರ (ಅಪರ) ತಾಲ್ಲೂಕು,
ಯಲಹಂಕ, ಬೆಂಗಳೂರು

PR. 83
SC 10

OFFICE OF THE CHAIRMAN, EXPERT COMMITTEE,

ON PROMOTION OF AUXILIARY, POLICE OFFICER TO THE IPS, BANGALORE

OFFICIAL MEMORANDUM

No. 3/2013, Date: 28th January, 2014

Sub : Constitution of Committee to assess the request of Auxiliary Police officers for promotion to IPS as per the directions of the Hon'ble High Court of Karnataka - reg.

Ref : This Office Official Memorandum of even number dt:27-12-2013.

(Extension of time limit)

This has reference to the Official Memorandum of even number dated: 27-12-2013 calling for responses from various stake holders and other officers so as to reach this office on or before 31-01-2014. Although a number of representations and responses have

been received from officers, some others have requested for additional time for submitting their representations, on the ground that certain important pieces of information have to be obtained from different States under the RTI Act etc.

The committee has considered the request of officers and have decided to extend the last date to 03-03-2014 for filing representations. **It is also hereby indicated that no further extension will be granted.**

Officers are once again reminded to make their representation as precise and to the point as possible. Unit officers are requested to putup this circular on the notice board and give wide publicity as was done with respect to the earlier Official Memorandum dated: 27-12-2013.

A.R. INFANT,
Chairman, Expert Committee,
On Promotion of Auxiliary,
Police Officer to the IPS

P R 110

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE- CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

Sub : KVAT Act, 2003 - Clarification under Section 59(4) regarding the rate of tax applicable on certain kitchen/household containers- reg.

Ref : Application dated:23.04.2013 of M/s. Hamilton Housewares Pvt. Ltd., Bangalore-560026. (TIN:29430210217)

In the application cited above of M/s. Hamilton Housewares Pvt. Ltd., No.114/14, 1st Floor, Patel Puttaiah Industrial Estate, Behind B.H.E.L. factory, Deepanjali Nagar, Off Mysore Road, Bangalore-560026, has sought clarification regarding the rate of tax applicable on certain kitchen/ household containers.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO.CLR.CR.07/13-14, DATED: 30-01-2014

It is clarified that 'Tiffin carriers, basins, bowls, tumblers, jars and jugs' made of plastic, steel, melamine and glass that are used in kitchen or household as containers are liable to tax at 5.5% with effect from 01.04.2013 in terms of the Notification-II No. FD 36 CSL 2013, dated 05.03.2013.

AJAY SETH,
Commissioner of Commercial Taxes,
(Karnataka), Bangalore

P R 111
S C 100

ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052

ವಿಷಯ : ಸಮಾಪನೆಯಲ್ಲಿರುವ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಹಕಾರ ಗೃಹ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು ಇದರ ನೋಂದಣಿ ರದ್ದುಪಡಿಸುವ ಬಗ್ಗೆ

ಉಲ್ಲೇಖ : ಸಮಾಪನಾಧಿಕಾರಿಗಳು, ಕರ್ನಾಟಕ ರಾಜ್ಯ ಹರಿಜನ ಮತ್ತು ಗಿರಿಜನ ಗೃಹ ನಿರ್ಮಾಣ ನಿಗಮ, ನಿ., ಬೆಂಗಳೂರು ರವರ ಪತ್ರದ ಸಂಖ್ಯೆ: ಕೆಎಸ್ಎಸ್‌ಸಿಹೆಚ್/ಎಲ್‌ಕ್ಯೂಡಿ/15/2011–12, ದಿನಾಂಕ: 14–03–2013 ಹಾಗೂ ಡಿಆರ್‌ಜಿಎನ್/ಎಲ್‌ಕ್ಯೂಡಿ/88/2013–14, ದಿನಾಂಕ: 01–10–2013

ಪ್ರಸ್ತಾವನೆ :

ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಹಕಾರ ಗೃಹ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು ಈ ಸಂಸ್ಥೆಯು ರಾಜ್ಯದ ಎಲ್ಲಾ ತಾಲ್ಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಹಕಾರ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಧನ ಸಹಾಯ ನೀಡಿ ಗ್ರಾಮೀಣ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ನೆರವಾಗುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದು ರಾಜ್ಯ ಮಟ್ಟದ ಕಾರ್ಯವ್ಯಾಪ್ತಿಯ ಸಂಸ್ಥೆಯಾಗಿದ್ದು, ಈ ಸಂಸ್ಥೆಯು ಅನೇಕ ವರ್ಷಗಳು ತನ್ನ ಬೈಲಾ ಉದ್ದೇಶಿತ ಚಟುವಟಿಕೆಗಳನ್ನು ನಿರ್ವಹಿಸುತ್ತಾ ಬಂದಿದ್ದು, ನಂತರ ಹಲವು ಜನೋಪಯೋಗಿ ಹಾಗೂ ಜನ ಸ್ನೇಹ ಗೃಹ ನಿರ್ಮಾಣ ಸಾಲ ನೀಡಿಕೆ ಯೋಜನೆಗಳು ರಾಜ್ಯ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ಹಾಗೂ ವಾಣಿಜ್ಯ ಬ್ಯಾಂಕುಗಳಿಂದ ವಿತರಿಸಿರುವ ಹಲವು ಯೋಜನೆಗಳು ಉದಯಿಸಿಕೊಂಡ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗೃಹ ನಿರ್ಮಾಣ

ಸಹಕಾರ ಸಂಘಗಳ ಸಾಲ ಪಡೆಯುವ ಸದಸ್ಯರುಗಳು ಇಲ್ಲವಾಗುತ್ತಾ ಬಂದು 2000ರ ಅಂತ್ಯಕ್ಕೆ ಸಾಲ ಪಡೆಯುವ ಆಕಾಂಕ್ಷಿಗಳು ಈ ಸಂಸ್ಥೆಯತ್ತ ಬಾರದ ಕಾರಣ ತಾಲ್ಲೂಕು ಮಟ್ಟದ ಸಹಕಾರ ಸಂಘಗಳು ತನ್ಮೂಲಕ ರಾಜ್ಯ ಮಟ್ಟದ ಅಂದರೆ ಈ ಸಂಸ್ಥೆಯು ಸಹ ನಿಷ್ಕ್ರಿಯೆಗೊಂಡಿತು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಹಕಾರ ಗೃಹ ನಿರ್ಮಾಣ ಸಹಕಾರ ಸಂಘಗಳು ಸಾಲ ಪಡೆದಿದ್ದ ಸದಸ್ಯರ ಸಾಲವನ್ನು ಹಾಗೂ ಸಂಬಂಧಿಸಿದ ಬಡ್ಡಿಯನ್ನು ಮನ್ನಾ ಮಾಡಿ ಹೊಂದಾಣಿಕೆ ಮಾಡಿಕೊಳ್ಳಲು ಸರ್ಕಾರವು ಆದೇಶ ನೀಡಿ ತತ್ಸಂಬಂಧಿ ಮೊಬಲಗನ್ನು ಬಿಡುಗಡೆ ಮಾಡುವ ಮೂಲಕ ಕೆಳಹಂತದ ಸಂಘಗಳಿಗೆ ನೆರವು ನೀಡಿತು. ಸರ್ಕಾರದ ಸಾಲ ಮನ್ನಾ ಆದ ನಂತರ ಸಾಲ ವಿತರಣೆಯಾಗಲಿ, ಸಾಲ ವಸೂಲಿ ಕಾರ್ಯಗಳು ಏನೂ ಇಲ್ಲದ ಕಾರಣ ಈ ಸಂಸ್ಥೆಯನ್ನು ಆದೇಶದ ಸಂಖ್ಯೆ: DLS/LQD/9/1987–88, ದಿನಾಂಕ: 12–04–1984 ಹಾಗೂ 19–12–1994ರಂದು ಸಮಾಪನೆಗೊಳಿಸಿ ಸಮಾಪನಾಧಿಕಾರಿಯವರನ್ನು ನೇಮಿಸಲಾಗಿತ್ತು.

ಸಮಾಪನಾಧಿಕಾರಿಗಳು ದಿನಾಂಕ: 25–03–2012ರ ಅಂತ್ಯಕ್ಕೆ ಇದ್ದಂತೆ ಪಾವತಿಸಬೇಕಾದ ಬಾಕಿಗಳು ಹಾಗೂ ವೆಚ್ಚಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಜಮಾ ಖರ್ಚನ್ನು ಲಾಭ–ನಷ್ಟ ತಃಖ್ತೆ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಯನ್ನು ಸಿದ್ಧಪಡಿಸಿ ಸಂಘದ ನೋಂದಣಿ ರದ್ಧತಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಲೆಕ್ಕ ಪರಿಶೋಧನಾ ಇಲಾಖೆಯಿಂದ ಲೆಕ್ಕಪರಿಶೋಧನಾ ವರದಿ ಬಾರದಿದ್ದ ಕಾರಣ ಸದರಿ ಸಂಘದ ನೋಂದಣಿ ರದ್ಧತಿಯಾಗದೆ ಉಲ್ಲೇಖಿತ ದಿನಾಂಕ: 01–10–2013ರಂದು ಆಸ್ತಿ ಜವಾಬ್ದಾರಿಯನ್ನು ಶೂನ್ಯಗೊಳಿಸಿದ ಲೆಕ್ಕಪರಿಶೋಧನಾ ಇಲಾಖೆಯಿಂದ ಲೆಕ್ಕಪರಿಶೋಧನೆಯಾಗಿರುವ ವರದಿಯನ್ನು ಸಮಾಪನಾಧಿಕಾರಿಗಳು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಗಣಿಸಿ, ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಸದರಿ ಸಂಘದ ಅಸ್ತಿತ್ವದಿಂದ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಿಲ್ಲವೆಂದು ಮನಗೊಂಡು ಸಮಾಪನಾಧಿಕಾರಿಗಳ ಶಿಫಾರಸ್ಸಿನನ್ವಯ ಈ ಕೆಳಕಂಡಂತೆ ಸಂಘದ ನೋಂದಣಿ ರದ್ಧತಿ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಸಸಂನಿ/ಸಮಾಪನೆ/193/1998–99, ದಿನಾಂಕ: 07–01–2014

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 75 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ, ಡಾ॥ ಎನ್.ಎಸ್. ಚನ್ನಪ್ಪಗೌಡ, ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಆದ ನಾನು ಕರ್ನಾಟಕ ರಾಜ್ಯ ಹರಿಜನ ಮತ್ತು ಗಿರಿಜನ ಗೃಹ ನಿರ್ಮಾಣ ನಿಗಮ, ನಿಯಮಿತ, ಬೆಂಗಳೂರು, ಇದರ ನೋಂದಣಿ ಸಂಖ್ಯೆ: F4/HBS/2050/RCS/1965–66, ದಿನಾಂಕ: 14–03–1966ನ್ನು ರದ್ದುಪಡಿಸಿ ಆದೇಶಿಸಿರುತ್ತೇನೆ. ಈ ನೋಂದಣಿ ರದ್ಧತಿ ಆದೇಶದ ದಿನಾಂಕದಿಂದ ಸದರಿ ಸಂಘದ ಕಾರ್ಯ ಚಟುವಟಿಕೆಗಳು ಸಂಪೂರ್ಣವಾಗಿ ನಿಂತುಹೋಗಿರುತ್ತದೆಂದು ಸಂಘವು ಅಸ್ತಿತ್ವದಲ್ಲಿಲ್ಲದೆ ವಿಸರ್ಜಿತವಾಗಿದೆಯೆಂದು ಪರಿಗಣಿಸಿ, ಸಂಘದ ದಾಖಲಾತಿಗಳನ್ನು ಸಹಕಾರ ಸಂಘಗಳ ಉಪ ನಿಬಂಧಕರು, ಉತ್ತರ ವಲಯ, ಮಲ್ಲೇಶ್ವರಂ, ಬೆಂಗಳೂರು ಇವರ ಕಛೇರಿಗೆ ಒಪ್ಪಿಸಿ ಸ್ವೀಕೃತಿ ಪಡೆದುಕೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಹಸ್ತಾಕ್ಷರ ಹಾಗೂ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ: 07–01–2014ರಂದು ಹೊರಡಿಸಲಾಗಿದೆ.

ಡಾ॥ ಎನ್.ಎಸ್. ಚನ್ನಪ್ಪಗೌಡ,
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು

PR 112
SC 10

ಜಂಟಿ ನಿರ್ದೇಶಕರ ಕಾರ್ಯಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮಂಗಳೂರು
ಊರ್ವ ಸ್ಟೋರ್ಸ್, ಅಂಚೆ : ಅಶೋಕ ನಗರ, ಮಂಗಳೂರು–575006.

ಅಧಿಕೃತ ಜ್ಞಾಪನ

ಸಂಖ್ಯೆ : ಸೈಕಮ/ಸಿಬ್ಬಂದಿ/ಶಿಸ್ತು/2013/02, ದಿನಾಂಕ : 08–11–2013.

ವಿಷಯ : ಮಾಜಿ ನಾಯಕ್, ನಿಂಗಪ್ಪ ಫಕೀರಪ್ಪ ಕಬ್ಬರಗಿ, ಮೇಟಿ–ಕಂ–ವಾಚ್‌ಮನ್ (ಪ್ರೊಬೇಷನರ್) ಇವರನ್ನು ಸೇವೆಯಿಂದ ಬಿಡುಗಡೆಗೊಳಿಸುವ ಕುರಿತು.

ಉಲ್ಲೇಖ :
1. ಈ ಕಾರ್ಯಾಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ : ಸೈಕಮ/ಸಿಬ್ಬಂದಿ/ಸಿನೇವ/ಗ್ರೂಪ್‌ಡಿ/2012, ದಿನಾಂಕ : 30–05–2012.
2. ಮಾಜಿ ನಾಯಕ್, ನಿಂಗಪ್ಪ ಫ ಕಬ್ಬರ್ಗಿ, ಮೇಟಿ–ಕಂ–ವಾಚ್‌ಮನ್ ರವರ ರಾಜೀನಾಮೆ ಪತ್ರ ದಿನಾಂಕ : 05–11–2013.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರನ್ವಯ **ಶ್ರೀ ನಿಂಗಪ್ಪ ಫಕೀರಪ್ಪ ಕಬ್ಬರಗಿ,** ರವರು ಗ್ರೂಪ್ 'ಡಿ' ಹುದ್ದೆಯಾದ ಮೇಟಿ–ಕಂ–ವಾಚ್‌ಮನ್, ಸೈನಿಕ ವಿಶ್ರಾಂತಿ ಗೃಹ, ಮಂಗಳೂರಿನಲ್ಲಿ ಕರ್ತವ್ಯಕ್ಕೆ ದಿನಾಂಕ : 14–06–2012 ರ ಪೂರ್ವಾಹ್ನ ಹಾಜರಾಗಿದ್ದು, ದಿನಾಂಕ : 05–10–2013 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆ. ದಿನಾಂಕ : 07–10–2013 ರಿಂದ 11–10–2013 (ಉಭಯ ದಿನಗಳು ಸೇರಿದಂತೆ) ಒಟ್ಟು 05 ದಿನಗಳ ಗಳಿಕೆ ರಜೆಗಾಗಿ ಅರ್ಜಿ ಸಲ್ಲಿಸಿ ಮಂಜೂರಾತಿ ಪಡೆದು, ರಜಾ ಅವಧಿಯಲ್ಲಿರುತ್ತಾರೆ.

ಉಲ್ಲೇಖ (2) ರನ್ವಯ ಸದರಿಯವರು ಸಲ್ಲಿಸಿರುವ ರಾಜೀನಾಮೆ ಪತ್ರದ ಮೇರೆಗೆ ಈ ಕೆಳಗಿನಂತೆ ಆದೇಶಿಸಲಾಗಿದೆ.

ಮಾಜಿ ನಾಯಕ್ **ನಿಂಗಪ್ಪ ಫಕೀರಪ್ಪ ಕಬ್ಬರಗಿ,** ಮೇಟಿ–ಕಂ–ವಾಚ್‌ಮನ್, ಸೈನಿಕ ವಿಶ್ರಾಂತಿ ಗೃಹ, ಮಂಗಳೂರುರವರನ್ನು ಸದರಿಯವರು ಸಲ್ಲಿಸಿರುವ ರಾಜೀನಾಮೆ ಪತ್ರದ ಮೇರೆಗೆ ದಿನಾಂಕ : 15–10–2013 ರ ಪೂರ್ವಾಹ್ನದಿಂದ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ.

ಜಂಟಿ ನಿರ್ದೇಶಕರು,
ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ,
ಮಂಗಳೂರು–575006, ದಕ್ಷಿಣ ಕನ್ನಡ ಜಿಲ್ಲೆ.

P.R. 99

ಜಂಟಿ ನಿರ್ದೇಶಕರ ಕಾರ್ಯಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮಂಗಳೂರು

ಊರ್ವ ಸ್ಟೋರ್ಸ್, ಅಂಚೆ : ಅಶೋಕ ನಗರ, ಮಂಗಳೂರು–575006.

ಅಧಿಕೃತ ಜ್ಞಾಪನ

ಸಂಖ್ಯೆ : ಸೈಕಮ/ಸಿಬ್ಬಂದಿ/ಆಡಳಿತ/2013/01, ದಿನಾಂಕ : 06–11–2013.

ವಿಷಯ : ಮಾಜಿ ಸಿಪಾಯಿ ಉಮೇಶ, ಮೇಟಿ–ಕಂ–ವಾಚ್‌ಮನ್ (ಪ್ರೊಬೇಷನರ್) ಇವರನ್ನು ಸೇವೆಯಿಂದ ಬಿಡುಗಡೆಗೊಳಿಸುವ ಕುರಿತು.

ಉಲ್ಲೇಖ : 1. ಈ ಕಾರ್ಯಾಲಯದ ಪತ್ರ ಸಂಖ್ಯೆ : ಸೈಕಮ/ಸಿಬ್ಬಂದಿ/ಸಿನೇವ/ಗ್ರೂಪ್‌ಡಿ/2012, ದಿನಾಂಕ : 18–06–2012.

2. ಮಾಜಿ ಸಿಪಾಯಿ ಉಮೇಶ, ಮೇಟಿ–ಕಂ–ವಾಚ್‌ಮನ್ ರವರ ಮನವಿ ಪತ್ರ ದಿನಾಂಕ : 15–10–2013.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರನ್ವಯ ಮಾಜಿ ಸಿಪಾಯಿ ಉಮೇಶ, ರವರು ಗ್ರೂಪ್ 'ಡಿ' ಹುದ್ದೆಯಾದ ಮೇಟಿ–ಕಂ–ವಾಚ್‌ಮನ್, ಸೈನಿಕ ವಿಶ್ರಾಂತಿ ಗೃಹ, ಮಂಗಳೂರಿನಲ್ಲಿ ಕರ್ತವ್ಯಕ್ಕೆ ದಿನಾಂಕ : 18–06–2012 ರ ಪೂರ್ವಾಹ್ನ ಹಾಜರಾಗಿದ್ದು, ದಿನಾಂಕ : 11–10–2012 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆ. ದಿನಾಂಕ : 12–10–2013 ರಿಂದ 20–10–2013 (ಉಭಯ ದಿನಗಳು ಸೇರಿದಂತೆ) ಒಟ್ಟು 09 ದಿನಗಳ ಪರಿವರ್ತಿತ ರಜೆಗಾಗಿ ಅರ್ಜಿ ಸಲ್ಲಿಸಿ ಮಂಜೂರಾತಿ ಪಡೆದು, ರಜಾ ಅವಧಿಯಲ್ಲಿರುತ್ತಾರೆ.

ಏತನ್ಮಧ್ಯೆ ಉಲ್ಲೇಖ (2) ರನ್ವಯ ಸದರಿಯವರು ತಮಗೆ ವೈಯಕ್ತಿಕ ತೊಂದರೆಗಳಿಂದಾಗಿ, ತಮ್ಮನ್ನು ಸೇವೆಯಿಂದ ಬಿಡುಗಡೆಗೊಳಿಸುವಂತೆ ಕೋರಿ, ನೇಮಕಾಧಿಕಾರಿಯಾದ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು, ದಿನಾಂಕ : 21–10–2013ರ ಪೂರ್ವಾಹ್ನದಿಂದ ಕರ್ತವ್ಯಕ್ಕೆ ಗೈರುಹಾಜರಾಗಿರುತ್ತಾರೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

ಮಾಜಿ ಸಿಪಾಯಿ ಉಮೇಶ, ಮೇಟಿ–ಕಂ–ವಾಚ್‌ಮನ್,(ಪ್ರೊಬೇಷನರ್) ಸೈನಿಕ ವಿಶ್ರಾಂತಿ ಗೃಹ, ಮಂಗಳೂರುರವರನ್ನು ಸ್ವಯಂ ಕೋರಿಕೆ ಮೇರೆಗೆ ದಿನಾಂಕ : 21–10–2013ರ ಪೂರ್ವಾಹ್ನದಿಂದ ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ.

ಜಂಟಿ ನಿರ್ದೇಶಕರು,
ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ,
ಮಂಗಳೂರು–575006, ದಕ್ಷಿಣ ಕನ್ನಡ ಜಿಲ್ಲೆ.

P.R. 100

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಒಇ 25 ಪೊಸಿಲಿ 2013, ಬೆಂಗಳೂರು, ದಿನಾಂಕ : 04–02–2014.

ವೈಜ್ಞಾನಿಕ ಅಧಿಕಾರಿ (ಎಫ್‌ಎಸ್‌ಎಲ್) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ : 31–12–2012 ರಲ್ಲಿದ್ದಂತೆ ದಿನಾಂಕ : 01–06–2013ರಲ್ಲಿ ಪ್ರಕಟಿಸಿ, ಪಟ್ಟಿಯಲ್ಲಿ ನಮೂದಿಸಿದ ಅಧಿಕಾರಿಗಳ ಜೇಷ್ಠತೆ : ಸೇವಾ ವಿವರಗಳ ಕುರಿತಂತೆ ಆಕ್ಷೇಪಣೆ ಅಥವಾ ಸಲಹೆಗಳನ್ನು ಕೇಳಲಾಗಿತ್ತು. ಅದರನ್ವಯ ಬಂದಿದ್ದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ವೈಜ್ಞಾನಿಕ ಅಧಿಕಾರಿ (ಎಫ್‌ಎಸ್‌ಎಲ್) ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ : 31–12–2012 ರಲ್ಲಿದ್ದಂತೆ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಅನುಬಂಧ–ಎ

ದಿನಾಂಕ : 31–12–2012 ರಲ್ಲಿದ್ದಂತೆ ವೈಜ್ಞಾನಿಕ ಅಧಿಕಾರಿ ವೃಂದದ ವರ್ಗವಾರು ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿ

Sl. No	Name (Sriyuths)	Date of Birth	Date of Appointment	Date of Appointment/ Promotion as Asst. Director	Remarks
	Questioned Section				
1.	C.Ashwath	03.08.1946	03.10.1974	07.09.1982	Promoted
2.	Lakshminarayana	20.06.1953	30.09.1974	07.11.1983	Promoted
3.	S.A.Inam	06.04.1954	04.09.1981	06.09.1991	Promoted
4.	Shankarappa Murala	01.05.1953	10.12.1985	02.12.1999	
	Toxicology Section				
5.	K.N.Basavaraju (DR)	01.04.1949	29.11.1975	29.11.1975	
6.	K.T.Venkatesh	26.04.1949	29.06.1978	29.09.1984	Promoted
7.	R. Rangegowda	02.03.1951	30.08.1978	01.10.1984	Promoted
8.	C.M.Mahadevaiah (SC)	13.10.1953	02.09.1978	06.09.1991	Promoted

Sl. No	Name (Sriyuths)	Date of Birth	Date of Appointment	Date of Appointment/ Promotion as Asst. Director	Remarks
9.	G.V.Nayak	21.08.1959	11.10.1985	02.12.1999	Promoted
10.	B.N .Kadaramandalagi	01.06.1961	14.10.1985	02.12.1999	Promoted
11.	N.R. Nayak	01.03.1957	08.10.1985	02.12.1999	Promoted
12.	Praveen Umesh Sanganala Mutt (DR)	10.04.1977	04.05.2011	04.05.2011	
13.	Sujatha .K.M (DR) (SC)	04.02.1973	04.05.2011	04.05.2011	
14.	Dr. M.-D,Gowtham (SC)	20.01.1977	11.02.2004	10.10.2011	
15.	Dr. Gunamma Patil	05.08.1970	25.02.2004	10.10.2011	
16.	Krithika.N	18.01.1978	23.02.2004	10.10.2011	
17.	Vinod J.Lakkappan	22.07.1974	15.03.2004	10.10.2011	
18.	S.M. Bhargavi (SC)	05.08.1979	19.02.2004	10.10.2011	
19.	M.P. Nagaraju (SC)	15.06.1976	16.02.2004	10.10.2011	
Chemical Section					
20.	P.R. Jayaramu	24.03.1952	27.07.1978	04.12.1984	Promoted
21.	P.Mallesh (SC)	12.05.1952	07.10.1985	02.12.1999	Promoted
22.	C.Manjappa	23.05.1952	10.10.1985	15.07.2008	
Biology Document					
23.	B.Raghavendra Rao (DR)	24.06.1943	14.12.1964	14.12.1964	
24.	T.R. Kumari	24.05.1952	09.08.1972	07.09.1982	Promoted
25.	L.Prakash	15.05.1949	25.09.1974	07.09.1982	Promoted
26.	B.Nanjundappa (SC)	13.03.1951	04.10.1978	29.03.1985	Promoted
27.	D.Siddaramaiah	03.05.1953	05.09.1981	06.09.1991	Promoted
28.	C.K.Krishnaraju	01.06.1963	07.10.1985	10.10.1991	Promoted
29.	S.N.Gaonkar	15.05.1956	09.10.1985	02.12.1999	Promoted
30.	Dr.Chandrashekar (DR)	05.05.1976	08.03.2011	08.03.2011	
31.	Dr. Chayakumari (SC) (DR)	03.04.1975	04.03.2011	04.03.2011	
32.	S.Radha	02.07.1975	12.02.2004	. 10.10.2011	
33.	Dr. P.Geethalakshmi	16.01.1975	16.02.2004	10.10.2011	
34.	D.Malathi	13.03.1979	12.02.2004	10.10.2011	
35.	Shahanaz Fathima .M	26.09.1974	13.02.2004	10.10.2011	
Fire Arm Section					
36.	N.G.Prabhakar	29.09.1951	09.08.1972	07.09.1982	Promoted
37.	B.K.Sathyathirtha	10.03.1961	10.10.1985	02.12.1999	
38.	B.C.Raveendra	07.06.1957	11.10.1985	28.02.2011	
Physics Section					
39.	T.S.Kenchappa (DR)	06.02.1952	28.12.1974	28.12.1974	
40.	Dhanarajachar	05.11.1954	14.09.1978	29.09.1984	Promoted
41.	B.Puttabasavaiah	14.10.1954	07.10.1985	02.12.1999	Promoted
42.	Srividya .C	21.12.1974	23.02.2004	10.10.2011	
Forensic Psychology Section					
43.	R.Gangaiah (SC)	09.01.1948	. 25.09.1980	02.12.1999	
44.	C. Dhivakar	25.01.1977	12.02.2004	10.10.2011	

.

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

P.R. 109

ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರ ಕಛೇರಿ

ವಿಷಯ : ಸ್ಥಗಿತಗೊಂಡಿರುವ ಬಂಡೇಮೊಮ್ಮೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ. ಹೊಳಲ್ಕೆರೆ ತಾಲ್ಲೂಕು ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73 ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ :

1. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿತ್ರದುರ್ಗ ಇವರ ಪತ್ರದ ಸಂಖ್ಯೆ : ಸನಿ:30:ಸಮಾಪನೆ/2012–13, ದಿನಾಂಕ : 16–12–2013.
2. ಈ ಕಛೇರಿಯ ಕಾರಣ ಕೇಳಿ ನೋಟೀಸು ದಿನಾಂಕ : 26–12–2013.
3. ಸಹಕಾರ ಅಭಿವೃದ್ಧಿ ಅಧಿಕಾರಿ, ಹೊಳಲ್ಕೆರೆ ತಾ. ಇವರ ಪತ್ರದ ದಿನಾಂಕ : 10–01–2014.

ಪ್ರಸ್ತಾವನೆ :

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರು ಉಲ್ಲೇಖ (1)ರಲ್ಲಿ ಕಾಣಿಸಿದ ಪ್ರಸ್ತಾವನೆ ಪ್ರಕಾರ ಬಂಡೇಬೊಮ್ಮೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ. ಹೊಳಲ್ಕೆರೆ ತಾಲ್ಲೂಕು ಸಂಘದ ನೋಂದಣಿ ಸಂಖ್ಯೆ : ಸನಿ/30/ಆರ್‌ಜಿಎನ್/30518/2004–05, ದಿನಾಂಕ : 21–05–2004 ಈ ಸಂಘದ ಕಾರ್ಯ ಚಟುವಟಿಕೆಗಳು ಅನೇಕ ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಮಂಡಳಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಹರಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನಃಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲವೆಂದು ಪ್ರಸ್ತಾವನೆ ಸಲ್ಲಿಸಿ, ಸದರಿ ಸಂಘವನ್ನು ಸಮಾಪನೆಗೊಳಿಸಲು ಕೋರಿರುತ್ತಾರೆ. ಈ ಬಗ್ಗೆ ಉಲ್ಲೇಖ (2) ರಲ್ಲಿ ಈ ಕಛೇರಿಯಿಂದ ನೀಡಿದ್ದು, ಸಂಘದ ಆಡಳಿತ ಮಂಡಳಿಯವರಿಗೆ ನೋಟೀಸು ಜಾರಿಯಾದ ಬಗ್ಗೆ ಉಲ್ಲೇಖ (3)ರಲ್ಲಿ ಸ್ವೀಕೃತಿ ಈ ಕಛೇರಿಗೆ ತಲುಪಿದೆ. ಆದಾಗ್ಯೂ ಅವರು ಯಾವುದೇ ಸಮಜಾಯಿಷಿ ಅಥವಾ ಪ್ರತಿಕ್ರಿಯೆಯನ್ನು ನೀಡದೇ ನಿರುತ್ಸಾಹ ತೋರಿಸಿರುತ್ತಾರೆ. ಈ ಸಂಘದಿಂದ ಸಂಘದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ. ಇದರಿಂದ ಸಂಘವು ಪುನಃಶ್ಚೇತನಗೊಳಿಸುವ ಹಂತವನ್ನು ಮೀರಿರುತ್ತದೆ. ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಂಘವನ್ನು ಸಮಾಪನೆಗೊಳಿಸುವುದೇ ಸೂಕ್ತವೆಂದು ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ : ಡಿಆರ್‌ಡಿ : ಸಮಾಪನೆ/ಸಿಆರ್/115/2013–14, ದಿನಾಂಕ : 30–01–2014

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 72(2) ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ನಂ. ಸಿಓ/201/ಸಿಎಲ್‌ಎಂ/2010, ಬೆಂಗಳೂರು ದಿನಾಂಕ : 17–02–2011 ಹಾಗೂ ಕ್ರಮಾಂಕ : ಸಿಓ/139/ಸಿಎಲ್‌ಎಂ/2010, ದಿನಾಂಕ : 04–07–2011ರ ಪ್ರಕಾರ ದತ್ತವಾದ ಅಧಿಕಾರದನ್ವಯ ಜಿ. ಓಬನಾಯಕ, ಸಹಕಾರ ಸಂಘಗಳ ಉಪನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಬಂಡೇಬೊಮ್ಮೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ, ಹೊಳಲ್ಕೆರೆ ತಾಲ್ಲೂಕು ಇದನ್ನು ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73 (1) ಅನ್ವಯ ಸಹಕಾರ ಅಭಿವೃದ್ಧಿ ಅಧಿಕಾರಿ, ಹೊಳಲ್ಕೆರೆ ತಾಲ್ಲೂಕು ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73(1) ಮತ್ತು 74ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು ಹಾಗೂ ನಿಬಂಧಕರ ಸುತ್ತೋಲೆಗೆ ಅನುಗುಣವಾಗಿ ಸಂಘದ ಆಸ್ತಿ–ಜವಾಬ್ದಾರಿ ವಿಲೇವಾರಿ ಮಾಡಿ ನೋಂದಣಿ ರದ್ಧತಿಗೆ ಪ್ರಸ್ತಾವೆ ಸಲ್ಲಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ನನ್ನ ಸ್ವ ಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನಾಂಕ : 30–01–2014 ರಂದು ಹೊರಡಿಸಿರುತ್ತೇನೆ.

P.R. 113

SC-10

ಸಹಕಾರ ಸಂಘಗಳ ಉಪ ನಿಬಂಧಕರು,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

THE COMPANIES (COURT) RULES, 1959

FORM NO. 155

(See Rule 329)

Members' voluntary winding up

Name of the Company: Nugen Lead Products Private Limited

Regd. Off: No. B-61, Dyavasandra Industrial Estate, Mahadevpura Post,

Bangalore 560 048

NOTICE CONVENING FINAL MEETING

NOTICE is hereby given in pursuance of section 497 of the Companies Act, 1956, that a General Meeting of the members of the above-named Company will be held at its Registered Office at No. B-61, Dyavasandra Industrial Estate, Mahadevpura Post, Bangalore 560 048 on Tuesday, 18th March 2014 at 11:00 A.M. for the purpose of having an account laid before them showing the manner in which the winding up has been conducted and the property of the company disposed of and of hearing any explanation that

may be given by the Liquidator and also of determining by a Special Resolution of the Company, the manner in which the books, accounts and documents of the Company and of the Liquidator shall be disposed of.

Dated this 10th February 2014

For Nugen Lead Products Private Limited

S.P.NAGARAJAN

Liquidator of the Company

PD. 15
SC. 5

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಂಇ 62 ಎಲ್‌ಆರ್‌ಎಂ 2013, ಬೆಂಗಳೂರು ದಿನಾಂಕ 31-01-2014

ಮೈಸೂರು ರಾಯಲ್ ಎಜುಕೇಷನ್ ಟ್ರಸ್ಟ್, (ರಿ), ಮಂಡ್ಯ ಇವರಿಗೆ ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಪಾಲಹಳ್ಳಿ ಗ್ರಾಮದ ಸ.ನಂ. 245/2ಬಿ ರಲ್ಲಿ 01-19 ಎ/ಗುಂಟೆ, ಸ.ನಂ. 268/ಎ ರಲ್ಲಿ 02-21 ಎ/ಗುಂ, ಸ.ನಂ. 268/ಬಿ ರಲ್ಲಿ 02-21 ಎ/ಗು, ಸ.ನಂ. 269/ಪಿ1 ರಲ್ಲಿ 01-05 ಎ/ಗುಂ, ಸ.ನಂ. 269/ಪಿ2 ರಲ್ಲಿ 01 ಎಕರೆ, 269/ಪಿ3 ರಲ್ಲಿ 0-21.04 ಗುಂಟೆ, ಸ.ನಂ. 269/ಪಿ4 ರಲ್ಲಿ 0-21.04 ಗುಂಟೆ, ಸ.ನಂ. 269/ಪಿ5 ರಲ್ಲಿ 0-21.04 ಗುಂಟೆ, ಸ.ನಂ. 269/ಪಿ6 ರಲ್ಲಿ 0-21.04 ಗುಂಟೆ ಹೀಗೆ ಒಟ್ಟು 10-30 ಎ/ಗುಂ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸಲು ಅನುಮತಿ ನೀಡುವಂತೆ ಶಿಫಾರಸ್ಸು ಮಾಡಿ, ಜಿಲ್ಲಾಧಿಕಾರಿ, ಮಂಡ್ಯ ಇವರು ಪ್ರಸ್ತಾವನೆ ಸಂಖ್ಯೆ ಎಲ್‌ಆರ್‌ಎಫ್/08/2013-14 ದಿನಾಂಕ 22-10-2013 ನ್ನು ಸಲ್ಲಿಸಿದ್ದರು. ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರ ಕಲಂ 109(1) ಮತ್ತು ಕರ್ನಾಟಕ ಭೂ ಸುಧಾರಣಾ ನಿಯಮಗಳು 1974ರ ನಿಯಮ 38-ಬಿ ಮತ್ತು 38-ಸಿ ರಲ್ಲಿನ ಷರತ್ತುಗಳನ್ನು ಪೂರೈಸಿರುವುದರಿಂದ, ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯಿತಿ ನೀಡಿ ಕಲಂ 109(1) ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ:-

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸಂಬಂಧಪಟ್ಟ ಜಮೀನನ್ನು ಎರಡು ವರ್ಷದೊಳಗೆ ಉಪಯೋಗಿಸತಕ್ಕದ್ದು ಮತ್ತು ಈ ಕುರಿತಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ (1961)ದ ಕಲಂ 109 ರನ್ವಯ ವಿನಾಯಿತಿ ಮಾತ್ರವಾಗಿದ್ದು ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
3. ಈ ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ, 1956ರ ಕಲಂ 3 ರಲ್ಲಿ ಹೇಳಿರುವಂತೆ ಶೇಕಡ 51 ಪೇಯ್ಡ್ ಅಪ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ, ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
4. ಸದರಿ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ (1964)ದ ಕಲಂ 95ರ ಮೇರೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಂದ ಅನುಮತಿ ಪಡೆಯತಕ್ಕದ್ದು.
5. ಉಲ್ಲೇಖಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರಗಳಿಂದ ಅಥವಾ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.
6. ಆ ಜಮೀನು ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ./ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದಲ್ಲಿ ಸಂಬಂಧಪಟ್ಟ ಪ್ರಾಧಿಕಾರದ ಅನುಮತಿ ಪಡೆಯತಕ್ಕದ್ದು.
7. ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರಂತೆ ಮಂಜೂರು ಮಾಡಬೇಕಾದಂತಹ ಯಾವುದೇ ಸರ್ಕಾರಿ ಜಮೀನುಗಳು ಇದ್ದಲ್ಲಿ ಅದನ್ನು ಹೊರತುಪಡಿಸಲಾಗಿದೆ.
8. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತ ಸರ್ಕಾರದ ಕಾನುನುಗಳನ್ನು ಪಾಲಿಸತಕ್ಕದ್ದು.

ಈ ಮೇಲಿನ ಯಾವುದೇ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಎಂ. ದಾಕ್ಷಾಯಣಮ್ಮ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ).

PR. 114
SC. 20

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 47 ಪಿಐಎಂ 2014, ಬೆಂಗಳೂರು, ದಿನಾಂಕ : 29–01–2014.

ದಿನಾಂಕ: 01–01–2014ರಲ್ಲಿದ್ದಂತೆ ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಹೋಮಿಯೋಪತಿ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪ್ರಕಟಿಸಲಾಗಿದೆ. ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಬಾಧಿತರು ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ 30 ದಿನಗಳ ಒಳಗಾಗಿ, ತಮ್ಮ ಆಕ್ಷೇಪಣೆಯನ್ನು ಪೂರಕ ದಾಖಲೆಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯ ನಂತರ ಬರುವಂತಹ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ನರಸಿಂಹರಾಜು

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಭಾ.ವೈ.ಪ ಮತ್ತು ಸಮನ್ವಯ).

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 47 ಪಿಐಎಂ 2014, ದಿನಾಂಕ : 29–01–2014ಕ್ಕೆ ಅನುಬಂಧ

ದಿನಾಂಕ: 01-01-2014 ರಲ್ಲಿರುವಂತೆ ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಹೋಮಿಯೋಪತಿ) ವೃಂದದವರ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ

ಕ್ರಸಂ.	ವೈದ್ಯಾಧಿಕಾರಿಯವರ ಹೆಸರು	ನೇರ ನೇಮಕಾತಿ/ ಮುಂಬಡ್ತಿ /ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ /ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ
1	2	3	4	5	6	7
1	ಡಾ॥ ರಮೇಶ್ ಎನ್.	ಮುಂಬಡ್ತಿ	18–12–1954	04–07–1986	11–06–2003	11–06–2003
2	ಡಾ॥ ಯಡ್ರಾಮಿ ಜೆ.ಬಿ.	ಮುಂಬಡ್ತಿ	01–06–1958	04–09–1995	20–05–2003	20–05–2003
3	ಡಾ॥ ಸಿ.ಬಿ. ನಂಜರಾಜು	ಮುಂಬಡ್ತಿ	21–07–1960	20–10–1986	20–01–2005	20–01–2005
4	ಡಾ॥ ಹೆಚ್.ಬಿ. ಮಂಜುನಾಥ ಕುಮಾರ್	ಮುಂಬಡ್ತಿ	22–07–1962	19–03–1987	24–01–2005	24–01–2005
5	ಡಾ॥ ಭಾರತಿ ಹಿರೇಮಠ	ಮುಂಬಡ್ತಿ	15–10–1965	14–12–1990	26–01–2005	26–01–2005
6	ಡಾ॥ ಸುರೇಶ್ ದುರ್ಗಪ್ಪ ದೊಡ್ಡವಾಡ	ಮುಂಬಡ್ತಿ	14–04–1961	10–09–1995	11–02–2005	11–02–2005
7	ಡಾ॥ ಮೀನಾಕ್ಷಿ ಎಸ್. ರತ್ನ ಹೊನ್ನದ	ಮುಂಬಡ್ತಿ	08–01–1961	24–01–1998	14–03–2005	14–03–2005
8	ಡಾ॥ ಮಹಮ್ಮದ್ ಅಫ್ತಾಬ್ ವಾಸೀಮ್	ಮುಂಬಡ್ತಿ	11–04–1962	11–09–1995	23–05–2012	23–05–2012

ಕ್ರಸಂ.	ವೈದ್ಯಾಧಿಕಾರಿಯವರ ಹೆಸರು	ನೇರ ನೇಮಕಾತಿ/ ಮುಂಬಡ್ತಿ /ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ /ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ
1	2	3	4	5	6	7
9	ಡಾ॥ ಗಿರಿಜಾ ಎಸ್. ಯು.	ಮುಂಬಡ್ತಿ	26–09–1965	13–09–1995	23–05–2012	23–05–2012

ಟಿ.ಎನ್. ನರಸಿಂಹರಾಜು
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ).

PR-106
SC-10

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 46 ಪಿಐಎಂ 2014, ಬೆಂಗಳೂರು, ದಿನಾಂಕ : 29–01–2014.

ದಿನಾಂಕ: 01–01–2014ರಲ್ಲಿದ್ದಂತೆ ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಯುನಾನಿ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪ್ರಕಟಿಸಲಾಗಿದೆ. ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಬಾಧಿತರು ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ 30 ದಿನಗಳ ಒಳಗಾಗಿ, ತಮ್ಮ ಆಕ್ಷೇಪಣೆಯನ್ನು ಪೂರಕ ದಾಖಲೆಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯ ನಂತರ ಬರುವಂತಹ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ನರಸಿಂಹರಾಜು
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ).

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 46 ಪಿಐಎಂ 2014, ದಿನಾಂಕ : 29–01–2014ಕ್ಕೆ ಅನುಬಂಧ

ದಿನಾಂಕ: 01–01–2014 ರಲ್ಲಿರುವಂತೆ ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಯುನಾನಿ) ವೃಂದದವರ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ

ಕ್ರಸಂ.	ವೈದ್ಯಾಧಿಕಾರಿಯವರ ಹೆಸರು	ನೇರ ನೇಮಕಾತಿ/ ಮುಂಬಡ್ತಿ/ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ
1	2	3	4	5	6	7
1	ಡಾ॥ ಎಸ್.ಟಿ.ಎ. ಖಾದ್ರಿ	ಮುಂಬಡ್ತಿ	01–09–1959	24–07–1981	16–08–2005	16–08–2005

ಕ್ರ.ಸಂ.	ವೈದ್ಯಾಧಿಕಾರಿಯವರ ಹೆಸರು	ನೇರ ನೇಮಕಾತಿ/ ಮುಂಬಡ್ತಿ/ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ
1	2	3	4	5	6	7
2	ಡಾ|| ಹಫೀಜ್ ಅಶ್ಫಾಕ್ ಅಹಮದ್	ಮುಂಬಡ್ತಿ	06–04–1956	27–07–1981	06–09–2005	06–09–2005
3	ಡಾ|| ಕೈಸರ್ ಪರ್ವೀನ್	ಮುಂಬಡ್ತಿ	25–12–1959	22–10–1986	20–08–2005	20–08–2005
4	ಡಾ|| ಯು. ಸನಾವುಲ್ಲಾ	ಮುಂಬಡ್ತಿ	01–06–1958	28–10–1986	10–08–2005	10–08–2005

ಟಿ.ಎನ್. ನರಸಿಂಹರಾಜು
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ).

PR-107
SC-10

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 48 ಪಿಐಎಂ 2014, ಬೆಂಗಳೂರು, ದಿನಾಂಕ : 29–01–2014.

ದಿನಾಂಕ: 01–01–2014ರಲ್ಲಿದ್ದಂತೆ ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ (ಆಯುರ್ವೇದ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪ್ರಕಟಿಸಲಾಗಿದೆ. ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಬಾಧಿತರು ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ 30 ದಿನಗಳ ಒಳಗಾಗಿ, ತಮ್ಮ ಆಕ್ಷೇಪಣೆಯನ್ನು ಪೂರಕ ದಾಖಲೆಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯ ನಂತರ ಬರುವಂತಹ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ನರಸಿಂಹರಾಜು
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ).

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 48 ಪಿಐಎಂ 2014 ದಿನಾಂಕ: 29–01–2014ಕ್ಕೆ ಅನುಬಂಧ

ದಿನಾಂಕ: 01–01–2014ರಲ್ಲಿರುವಂತೆ ಆಯುಷ್ ಇಲಾಖೆಯಲ್ಲಿನ ಹಿರಿಯ ವೈದ್ಯಾಧಿಕಾರಿ (ಆಯುರ್ವೇದ) ವೃಂದದ ಅಂತಿಮ ಜೇಷ್ಠತಾ ಪಟ್ಟಿ

ಕ್ರಸಂ.	ವೈದ್ಯಾಧಿಕಾರಿ ಹೆಸರು	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ ಜ್ಯೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8
1.	ಡಾ॥ ಎಸ್. ಪ್ರಮೀಳಾ	ಮುಂಬಡ್ತಿ	08–04–65	20–05–96	23–11–2000	23–11–2000	ಸರ್ಕಾರದ ಅಧಿಸೂಚನೆ ಸಂ:ಆಕುಕ/281/ಪಿಐಎಂ/01/, ದಿನಾಂಕ: 14–12–04ಲ್ಲಿ ಪೂರ್ವಾನ್ವಯವಾಗಿ ಬಡ್ತಿ ನೀಡಿರುವಂತೆ ಜೇಷ್ಠತೆ ನಿಗದಿಪಡಿಸಿದೆ.
2.	ಡಾ॥ ಅನುರಾಧ ಎಲ್. ಚಂಚಲಕರ್	ಮುಂಬಡ್ತಿ	22–07–66	18–06–96	31–12–2000	31–12–2000	
3.	ಡಾ॥ ಎಂ.ಎ. ದಾಸರ್	ಮುಂಬಡ್ತಿ	02–10–69	19–11–97	31–07–2001	31–07–2001	ಜೇಷ್ಠತಾ ಕ್ರಮಾಂಕವನ್ನು ಸರ್ಕಾರದ ಅಧಿಸೂಚನೆ ಸಂ:ಆಕುಕ/91/ ಪಿಐಎಂ/05 ದಿನಾಂಕ: 11–11–2005 ರಲ್ಲಿ ನಿಗಧಿಪಡಿಸಿದ ಜೇಷ್ಠತಾ ಕ್ರಮಾಂಕದಂತೆ ಜೇಷ್ಠತೆ ನಿಗಧಿಪಡಿಸಿದೆ.
4.	ಡಾ॥ ಬಿ.ಎಸ್. ಸೀತಾಲಕ್ಷ್ಮೀ	ಮುಂಬಡ್ತಿ	20–07–70	12–12–97	31–01–2002	31–01–2002	
5.	ಡಾ॥ ವಂದನಾ ಜೆ.ಗಾಳಿಯವರೆ	ಮುಂಬಡ್ತಿ	07–07–71	09–01–98	28–02–2002	28–02–2002	
6.	ಡಾ॥ ಸದಾಶಿವಾನಂದ	ಮುಂಬಡ್ತಿ	11–11–69	27–10–98	01–06–2003	01–06–2003	
7.	ಡಾ॥ ಎ.ಎಸ್. ಪುಷ್ಪ	ಮುಂಬಡ್ತಿ	18–11–63	08–08–91	22–03–2006	22–03–2006	ಸರ್ಕಾರದ ಅಧಿಸೂಚನೆ ಸಂ: ಆಕುಕ/417/ಪಿಐಎಂ/04, ದಿನಾಂಕ: 17–03–2006 ರಲ್ಲಿ ವೈ.ದ–1 (ಅ) ಹುದ್ದೆಗೆ ಪದೋನ್ನತಿ ನೀಡಿರುವಂತೆ ಜೇಷ್ಠತೆ ನಿಗಧಿಪಡಿಸಿದೆ.
8.	ಡಾ॥ ಮುರಳೀಧರ ಸಿ.	ಮುಂಬಡ್ತಿ	22–05–55	06–08–79	18–03–2006	18–03–2006	
9.	ಡಾ॥ ಬಸಪ್ಪ ವಾಲೀಕರ್	ಮುಂಬಡ್ತಿ	24–07–61	02–08–93	27–03–2006	27–03–2006	
10.	ಡಾ॥ ಶಿವಾನಂದ ಹೆಚ್.ಎಸ್.	ಮುಂಬಡ್ತಿ	10–10–70	24–10–98	21–03–2006	21–03–2006	
11.	ಡಾ॥ ಕೆ.ಟಿ. ಅಶ್ವಿನಿ	ಮುಂಬಡ್ತಿ	01–06–70	18–10–98	25–03–2006	25–03–2006	
12.	ಡಾ॥ ವೆಂಕಟರಾಮಯ್ಯ	ಮುಂಬಡ್ತಿ	20–05–69	02–11–98	30–09–2007	30–09–2007	ಸ.ಅಧಿಸೂಚನೆ ಸಂ: ಆಕುಕ/168/ಪಿಐಎಂ/07, ದಿನಾಂಕ: 10–04–2008ರಲ್ಲಿ ಕ.ನಾ.ಸೇ (ಆರ್.ಪಿ.ಪಿ) ನಿಯಮ2(1)(ಎ) ಅನ್ವಯ ಪೂರ್ವಾನ್ವಯವಾಗಿ ಬಡ್ತಿ ನೀಡಿರುವ ಪ್ರಯುಕ್ತ ಜೇಷ್ಠತೆ ನಿಗಧಿಪಡಿಸಿದೆ.
13.	ಡಾ॥ ನಾಗರಾಜಪ್ಪ ಬಿ.ಕೆ.	ಮುಂಬಡ್ತಿ	04–05–65	24–10–98	18–03–2006	18–03–2006	ಸ.ಅಧಿಸೂಚನೆ ಸಂ; ಆಕುಕ/417/ಪಿಐಎಂ/04 ದಿನಾಂಕ:17–03–2006 ರಲ್ಲಿ ವೈ.ದ–1 (ಅ), ಹುದ್ದೆಗೆ ಪದೋನ್ನತಿ ನೀಡಿರುವಂತೆ ಜೇಷ್ಠತೆ ನಿಗಧಿಪಡಿಸಿದೆ.
14.	ಡಾ॥ ಕಬಾಡಿ ಗಣೇಶ ಸನಾತಮ್	ಮುಂಬಡ್ತಿ	17–07–69	25–10–98	17–03–2006	17–03–2006	
15.	ಡಾ॥ ರಾಚಯ್ಯ ಆರ್.	ಮುಂಬಡ್ತಿ	23–07–60	26–10–98	25–03–2006	25–03–2006	
16.	ಡಾ॥ ಪುನೀತ್ ಬಾಬು ಪಿ.	ಮುಂಬಡ್ತಿ	22–12–70	31–10–98	24–06–2006	24–06–2006	

ಕ್ರ.ಸಂ.	ವೈದ್ಯಾಧಿಕಾರಿ ಹೆಸರು	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ ಜ್ಯೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8
17.	ಡಾ॥ ಮೀನಾಕ್ಷಿ ಅವರೂರು ಶಾಂತಣ್ಣ	ಮುಂಬಡ್ತಿ	07–12–62	06–11–98	01–04–2006	01–04–2006	
18.	ಡಾ॥ ರೇಣುಕಾ ಯಲ್ಲಪ್ಪ ತೇರಗಾಳ	ಮುಂಬಡ್ತಿ	01–05–71	19–02–99	01–04–2006	01–04–2006	
19.	ಡಾ॥ ಹೊನ್ನತ್ತಿ ಡಿ. ರಾಮರಾವ್	ಮುಂಬಡ್ತಿ	14–01–58	31–12–86	31–05–2007	31–05–2007	ಸ.ಅಧಿಸೂಚನೆ ಸಂ:ಆಕುಕ/125/ಪಿಐಎಂ/07, ದಿನಾಂಕ:10–05–2008 ರಲ್ಲಿ ವೈ.ದ–1(ಅ) ಹುದ್ದೆಗೆ ಪದೋನ್ನತಿ ನೀಡಿರುವಂತೆ ಜೇಷ್ಠತೆ ನಿಗಧಿಪಡಿಸಿದೆ.
20.	ಡಾ॥ ವೀರನಗೌಡ ಎಸ್. ಪಾಟೀಲ್	ಮುಂಬಡ್ತಿ	25–12–55	01–01–87	20–06–2007	20–06–2007	
21.	ಡಾ॥ ಶೋಭಾ ರಾಣಿ	ಮುಂಬಡ್ತಿ	18–08–61	31–12–86	17–05–2007	17–05–2007	
22.	ಡಾ॥ ಬಸವನಗೌಡ ಜಿ. ಪಾಟೀಲ್	ಮುಂಬಡ್ತಿ	10–05–60	30–12–86	23–07–2007	23–07–2007	
23.	ಡಾ॥ ಮೃತ್ಯಂಜಯ ಸ್ವಾಮಿ	ಮುಂಬಡ್ತಿ	24–09–55	30–12–86	11–02–2008	11–02–2008	ಸ.ಅಧಿಸೂಚನೆ ಸಂ:ಆಕುಕ/331/ಪಿಐಎಂ/07, ದಿನಾಂಕ:03–01–2008 ರಲ್ಲಿ ವೈ.ದ–1 (ಅ) ಹುದ್ದೆಗೆ ಪದೋನ್ನತಿ ನೀಡಿರುವಂತೆ ಜೇಷ್ಠತೆ ನಿಗಧಿಪಡಿಸಿದೆ.
24.	ಡಾ॥ ಪತ್ತರ್ ಯಮುನಪ್ಪ ಶೇಷಪ್ಪ	ಮುಂಬಡ್ತಿ	20–07–61	02–01–87	11–02–2008	11–02–2008	
25.	ಡಾ॥ ಮಧುಮತಿ ಎಂ.ಎಸ್.	ಮುಂಬಡ್ತಿ	05–08–59	01–01–87	11–01–2008	11–01–2008	
26.	ಡಾ॥ ಸಾಂಬ್ರೇಕರ್ ಶಾರದಾ ನಾರಾಯಣ	ಮುಂಬಡ್ತಿ	29–11–61	30–12–86	19–01–2008	19–01–2008	
27.	ಡಾ॥ ಗಿರಿ ರವೀಂದ್ರ	ಮುಂಬಡ್ತಿ	09–02–60	30–12–86	17–01–2008	17–01–2008	
28.	ಡಾ॥ ಮಿಟಗಾರ ಲಕ್ಷ್ಮಣ	ಮುಂಬಡ್ತಿ	01–06–56	27–08–97	10–01–2008	10–01–2008	
29.	ಡಾ॥ ಅಲಕಾನಂದ ರಾವ್ ಎಂ.ಜಿ.	ಮುಂಬಡ್ತಿ	14–04–61	03–01–87	22–01–2008	22–01–2008	
30.	ಡಾ॥ ಉಜ್ಜಪ್ಪ ಎಸ್. ಮಾಳಾಪುರ	ಮುಂಬಡ್ತಿ	08–06–54	03–12–86	25–01–2008	25–01–2008	
31.	ಡಾ॥ ಮಹಮದ್ ಹುಸೇನ್	ಮುಂಬಡ್ತಿ	01–03–59	29–12–86	11–01–2008	11–01–2008	
32.	ಡಾ॥ ವಾಸುದೇವ ಕೆ.	ಮುಂಬಡ್ತಿ	22–10–56	30–12–86	22–02–2011	22–02–2011	
33.	ಡಾ॥ ಸಂಗಮೇಶ್ ಎಂ. ಕಲಹಾಳ	ಮುಂಬಡ್ತಿ	19–05–60	01–01–87	22–02–2011	22–02–2011	ಸ.ಅಧಿಸೂಚನೆ ಸಂ:ಆಕುಕ/32/ಪಿಐಎಂ/08, ದಿನಾಂಕ: 22–02–2011 ರಲ್ಲಿ ವೈ.ದ–1(ಅ) ಹುದ್ದೆಗೆ ಪದೋನ್ನತಿ ನೀಡಿರುವಂತೆ ಜೇಷ್ಠತೆ ನಿಗಧಿಪಡಿಸಿದೆ.
34.	ಡಾ॥ ನಾಗೇಶ್ ಎಸ್.	ಮುಂಬಡ್ತಿ	21–01–57	29–12–86	22–02–2011	22–02–2011	
35.	ಡಾ॥ ಈಶ್ವರಯ್ಯ ಎಸ್. ಈರೇಮಠ	ಮುಂಬಡ್ತಿ	06–08–54	05–01–87	22–02–2011	22–02–2011	

ಕ್ರ.ಸಂ.	ವೈದ್ಯಾಧಿಕಾರಿ ಹೆಸರು	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ ಜ್ಯೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8
36.	ಡಾ|| ಗದಿಗೆಪ್ಪ ಎಂ. ಮಾಯಣ್ಣನವರ	ಮುಂಬಡ್ತಿ	04–05–59	05–01–87	22–02–2011	22–02–2011	
37.	ಡಾ|| ಗೀತಾ ಕೆ.ಎಸ್.	ಮುಂಬಡ್ತಿ	16–04–55	08–01–87	22–02–2011	22–02–2011	
38.	ಡಾ|| ಮಂಜುಳ ಎಸ್.ಎನ್.	ಮುಂಬಡ್ತಿ	01–10–58	08–01–87	22–02–2011	22–02–2011	
39.	ಡಾ|| ಪ್ರತಿಭಾ ಬಿ.	ಮುಂಬಡ್ತಿ	28–03–56	09–01–87	22–02–2011	22–02–2011	
40.	ಡಾ|| ಬಸವರಾಜಯ್ಯ ಸಿ.ಆರ್.	ಮುಂಬಡ್ತಿ	03–12–58	09–01–87	22–02–2011	22–02–2011	
41.	ಡಾ|| ಮಲ್ಲಣ್ಣ ಡಿ. ತೋಟದ್	ಮುಂಬಡ್ತಿ	20–01–62	09–01–87	22–02–2011	22–02–2011	
42.	ಡಾ|| ಮಹೇಶ್ವರ ಎಸ್. ಗುಗ್ಗರಿ	ಮುಂಬಡ್ತಿ	01–06–58	12–01–87	22–02–2011	22–02–2011	ಸ.ಅಧಿಸೂಚನೆ ಸಂ:ಆಕುಕ/32/ಪಿಐಎಂ/08, ದಿನಾಂಕ: 22–02–2011 ರಲ್ಲಿ ವೈ.ದ–1(ಅ) ಹುದ್ದೆಗೆ ಪದೋನ್ನತಿ ನೀಡಿರುವಂತೆ ಜೇಷ್ಠತೆ ನಿಗಧಿಪಡಿಸಿದೆ.
43.	ಡಾ|| ಸಿದ್ದೇಶ್ ಯು.	ಮುಂಬಡ್ತಿ	09–08–59	13–01–87	22–02–2011	22–02–2011	
44.	ಡಾ|| ರೂಪಾಬಾಯಿ ಕೆ.	ಮುಂಬಡ್ತಿ	23–05–59	05–01–87	22–02–2011	22–02–2011	
45.	ಡಾ|| ರಾಜೇಶ್ವರಿ ಪ್ರಸಾದ್	ಮುಂಬಡ್ತಿ	28–02–62	16–01–87	22–02–2011	22–02–2011	
46.	ಡಾ|| ರಾಜಣ್ಣ ಬಿ.	ಮುಂಬಡ್ತಿ	21–07–57	16–01–87	22–02–2011	22–02–2011	
47.	ಡಾ|| ಗೀತಾ ಎಂ.ಆರ್.	ಮುಂಬಡ್ತಿ	28–09–55	16–01–87	22–02–2011	22–02–2011	
48.	ಡಾ|| ರವಿ ಎ.ಪಿ.	ಮುಂಬಡ್ತಿ	08–03–54	16–01–87	22–02–2011	22–02–2011	
49.	ಡಾ|| ಸುರಯ್ಯ ಖಾನಂ	ಮುಂಬಡ್ತಿ	12–02–58	16–01–87	22–02–2011	22–02–2011	
50.	ಡಾ|| ಪಂಡಿತ್ ಎಲ್.ಪಿ	ಮುಂಬಡ್ತಿ	02–01–58	19–01–87	22–02–2011	22–02–2011	
51.	ಡಾ|| ಜವಹರಲಾಲ್ ಟಿ. ಪವಾರ್	ಮುಂಬಡ್ತಿ	11–12–58	19–01–87	22–02–2011	22–02–2011	
52.	ಡಾ|| ರಾಮಲಿಂಗಯ್ಯ	ಮುಂಬಡ್ತಿ	10–09–56	23–01–87	22–02–2011	22–02–2011	
53.	ಡಾ|| ಮೆಹರುಬಾನು ಎ.ಎಂ.	ಮುಂಬಡ್ತಿ	14–05–57	23–01–87	22–02–2011	22–02–2011	
54.	ಡಾ|| ಗೀತಾ ಎಸ್.ಪಿ.	ಮುಂಬಡ್ತಿ	01–04–55	05–02–87	22–02–2011	22–02–2011	
55.	ಡಾ|| ಸುನಂದಮ್ಮ ಎನ್.ಎಂ.	ಮುಂಬಡ್ತಿ	10–02–60	11–02–87	22–02–2011	22–02–2011	

ಕ್ರ.ಸಂ.	ವೈದ್ಯಾಧಿಕಾರಿ ಹೆಸರು	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ ಜ್ಯೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8
56.	ಡಾ॥ ವಿಜಯ ಕೆ.	ಮುಂಬಡ್ತಿ	04–03–60	23–02–87	22–02–2011	22–02–2011	
57.	ಡಾ॥ ಶೋಭಾ ಹೆಬ್ಬಾರ್	ಮುಂಬಡ್ತಿ	09–02–60	05–03–87	22–02–2011	22–02–2011	
58.	ಡಾ॥ ನಾಗರತ್ನ ಬಿ.ಪಿ.	ಮುಂಬಡ್ತಿ	21–06–61	05–03–87	22–02–2011	22–02–2011	
59.	ಡಾ॥ ವಾಹಿನಿ ರಾಮಚಂದ್ರನಾಯಕ್	ಮುಂಬಡ್ತಿ	15–03–62	24–04–87	22–02–2011	22–02–2011	
60.	ಡಾ॥ ಸುರೇಶ್ ಎಂ. ಬಿರಾದಾರ್	ಮುಂಬಡ್ತಿ	22–07–59	15–06–87	10–09–2012	10–09–2012	ಸ.ಅಧಿಸೂಚನೆ ಸಂ:ಆಕುಕ/604/ಪಿಐಎಂ/2011, ದಿನಾಂಕ: 10–09–2012 ರಲ್ಲಿ ವೈ.ದ–1(ಅ) ಹುದ್ದೆಗೆ ಪದೋನ್ನತಿ ನೀಡಿರುವಂತೆ ಜೇಷ್ಠತೆ ನಿಗಧಿಪಡಿಸಿದೆ.
61.	ಡಾ॥ ಸುಮಂಗಳ ಎನ್.	ಮುಂಬಡ್ತಿ	04–10–60	03–08–87	10–09–2012	10–09–2012	
62.	ಡಾ॥ ಸಜ್ಜನ್ ಕಲಕಪ್ಪ ಗುರಪ್ಪ	ಮುಂಬಡ್ತಿ	01–06–57	23–07–87	10–09–2012	10–09–2012	
63.	ಡಾ॥ ತೋಟಾರಾಧ್ಯ	ಮುಂಬಡ್ತಿ	18–11–54	16–07–87	10–09–2012	10–09–2012	
64.	ಡಾ॥ ವಿರೂಪಾಕ್ಷಯ್ಯ ಟಿ.ಎಂ.	ಮುಂಬಡ್ತಿ	01–06–60	25–09–87	10–09–2012	10–09–2012	
65.	ಡಾ॥ ಸಿದ್ದರಾಮಯ್ಯ ಕೆ. ಕುರ್ತಕೋಟಿ	ಮುಂಬಡ್ತಿ	01–08–54	23–09–87	10–09–2012	10–09–2012	
66.	ಡಾ॥ ಶೇಕರ್ ಎನ್. ಬೆನ್ನೂರ್	ಮುಂಬಡ್ತಿ	01–06–56	19–09–87	10–09–2012	10–09–2012	
67.	ಡಾ॥ ರಾಮಚಂದ್ರ ಬಿ.ಹೆಚ್.	ಮುಂಬಡ್ತಿ	03–08–60	04–05–91	10–09–2012	10–09–2012	
68.	ಡಾ॥ ಅಮರಗುಂಡಪ್ಪ ಎ.ಜಿ.ಡಿ.	ಮುಂಬಡ್ತಿ	20–03–55	02–05–91	10–09–2012	10–09–2012	
69.	ಡಾ॥ ವೀರಭದ್ರಪ್ಪ ಜಿ. ಮುಸರಿ	ಮುಂಬಡ್ತಿ	01–06–56	06–05–91	10–09–2012	10–09–2012	
70.	ಡಾ॥ ಉಮಾಪತೆಪ್ಪ ಎಸ್.	ಮುಂಬಡ್ತಿ	01–06–58	27–08–93	10–09–2012	10–09–2012	

ಟಿ.ಎನ್. ನರಸಿಂಹರಾಜು
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ ಮತ್ತು ಸಮನ್ವಯ).

PR-105
SC-50

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು

ಭೂ ಸ್ವಾಧೀನ ಕಾಯ್ದೆಯ ಕಲಂ 4(1)ರ ಕರ್ನಾಟಕ ತಿದ್ದುಪಡಿ ಕಾಯ್ದೆ 33/91 ರನ್ವಯ

ಅಧಿಸೂಚನೆ ಕ್ರಮಾಂಕ : ಕಗೃಮಂ/ಭೂಸ್ವಾವಿ/(ಹಾ)ದೇ.ಯ/1/2013–14, ದಿನಾಂಕ 26–12–2013

ಈ ಅಧಿಸೂಚನೆಯ ಅನುಬಂಧದಲ್ಲಿ ನಮೂದಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಅಂದರೆ, ಕರ್ನಾಟಕ ಗೃಹ ಮಂಡಳಿಯ ನಿವೇಶನ/ಮನೆಗಳನ್ನು ಕಟ್ಟಲು ಬೇಕಾಗುವುದೆಂದು ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಕಂಡು ಬಂದಿದೆ.

1991ನೇ ಸಾಲಿನ ಕರ್ನಾಟಕ ಭೂ ಸ್ವಾಧೀನ ಅಧಿನಿಯಮ 33 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂಸ್ವಾಧೀನ ಅಧಿನಿಯಮ 4(2) ನೆಯ ಪ್ರಕರಣದಲ್ಲಿ ವಿಹಿತವಾದ ಅಧಿಕಾರವನ್ನು ಉಪಯೋಗಿಸಲು ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಅಧಿಕಾರ ನೀಡಲಾಗಿದೆ.

ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಯಾವೊಬ್ಬ ವ್ಯಕ್ತಿಯೂ ಭೂಸ್ವಾಧೀನದ ಬಗ್ಗೆ ಆಕ್ಷೇಪಣೆಗಳನ್ನು ಮಾಡುವುದಿದ್ದಲ್ಲಿ, ಅಂತಹ ಆಕ್ಷೇಪಣೆಗಳನ್ನು ಈ ಅಧಿಸೂಚನೆಯು ಪ್ರಕಟಗೊಂಡ ತಾರೀಖಿನಿಂದ 30 ದಿನಗಳೊಗಾಗಿ 1991ನೇ ಇಸವಿ ಕರ್ನಾಟಕ ಭೂಸ್ವಾಧೀನ ಅಧಿನಿಯಮ ಕಾಯ್ದೆ 33 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣ ಅಧಿನಿಯಮ 3ಸಿ ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಗಳ ಪ್ರಶಾಸನ ಕಾರ್ಯಗಳನ್ನು ನಿರ್ವಹಿಸಲು ನೇಮಕ ಮಾಡಲಾದ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಲಿಖಿತ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸದರಿ ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ನಿಯೋಜಿಸಲ್ಪಟ್ಟ ಯಾವೊಬ್ಬ ಮೋಜಣಿದಾರರು ಅಥವಾ ಬೇರೆ ಯಾವುದೇ ಅಧಿಕಾರಿಗೆ ಅಡಚಣೆಗಳನ್ನುಂಟು ಮಾಡುವುದಾಗಲೀ ಅಥವಾ ಅತಿಕ್ರಮಿಸುವುದಾಗಲೀ ಮಾಡಬಾರದೆಂದು ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಎಲ್ಲರಿಗೂ ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರಿ ಜಮೀನಿನ ವಿಲೇವಾರಿಗಾಗಿ ಮಾರಾಟ, ಗುತ್ತಿಗೆ, ಅಡಮಾನ, ಹಸ್ತಾಂತರ, ವಿನಿಮಯ, ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವೊಂದು ವೆಚ್ಚ ಯಾ ಅಭಿವೃದ್ಧಿಗಳನ್ನು ಈ ಅಧಿಸೂಚನೆ ಪ್ರಕಟವಾದ ನಂತರ ಗೃಹ ಆಯುಕ್ತರರವರ ಮಂಜೂರಾತಿಯನ್ನು ಪಡೆಯದೇ ಮಾಡಿದ ಪಕ್ಷದಲ್ಲಿ, ಅಂತಿಮವಾಗಿ ಅಧಿಕೃತ ಸಂಗ್ರಹಣೆ ಮಾಡಲಾಗುವ ಸದರಿ ಜಮೀನಿನ ಅಂತಹ ಭೂ ಪರಭಾರೆಯ ಪರಿಹಾರವನ್ನು ನಿರ್ಧರಿಸುವ ಅಧಿಕಾರಿಯಿಂದ ಸದರಿ ಅಧಿನಿಯಮ 24ನೇ ಪ್ರಕರಣದ ಮೇರೆಗೆ ಉಪೇಕ್ಷಿಸಲಾಗುವುದು.

ಸದರಿ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಪರಿಶಿಷ್ಟ

ಜಿಲ್ಲೆ : ಹಾವೇರಿ **ತಾಲ್ಲೂಕು : ಹಾವೇರಿ** **ಹೋಬಳಿ : ಕರಜಗಿ** **ಗ್ರಾಮ : ದೇವಗಿರಿಯಲ್ಲಾಪುರ**

ಕ್ರಮ ಸಂಖ್ಯೆ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ				ಜಮೀನಿನ ವಿಸ್ತೀರ್ಣ	ಆಕಾರ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
1	ಶ್ರೀ ತೇಲಕರ ಶಾಂತಕುಮಾರ ಬಿನ್ ಲಕ್ಷ್ಮೀಕಾಂತಪ್ಪ (ಉತ್ತರ)	ಶ್ರೀ ತೇಲಕರ ಶಾಂತಕುಮಾರ ಬಿನ್ ಲಕ್ಷ್ಮೀಕಾಂತಪ್ಪ (ಉತ್ತರ)	110/1+2+3 +4+5/ಅ	ಖುಷ್ಕಿ	110/1+2+3 +4+5/ಇ	109	ಗ್ರಾಮದ ಗಡಿ	110/1+2+3+4 +5/ಬ	3–20	1.61
2	ಶ್ರೀ ಪುರದ ಬಸವರಾಜ ಬಿನ್ ಫಕ್ಕೀರಪ್ಪ	ಶ್ರೀ ಪುರದ ಬಸವರಾಜ – ಫಕ್ಕೀರಪ್ಪ	110/1+2+3 +4+5/ಬ	ಖುಷ್ಕಿ	110/1+2+3 +4+5/ಇ	109	110/1+2+3+4+ 5/ಅ	110/1+2+3+4 +5/ಕ	1–03	0.50
3	ಶ್ರೀ ಕಡ್ಲಿ ನಾಗಪ್ಪ ಬಿನ್ ಕೊಟ್ರಪ್ಪ	ಶ್ರೀ ಕಡ್ಲಿ ನಾಗಪ್ಪ – ಕೊಟ್ರಪ್ಪ	110/1+2+3+ 4+5/ಕ1	ಖುಷ್ಕಿ	110/1+2+3+4+ 5/ಕ2	109	110/1+2+3+4+ 5/ಬ	110/1+2+3+4 +5/ಕ5	0–35	0.40
4	ಶ್ರೀ ಡಾ॥ ನಾಗಪ್ಪ ತಂದೆ ಕೊಟ್ರಪ್ಪ ಕಡ್ಲಿ	ಶ್ರೀ ಡಾ॥ ನಾಗಪ್ಪ ತಂದೆ ಕೊಟ್ರಪ್ಪ ಕಡ್ಲಿ	110/1+2+3+ 4+5/ಕ2	ಖುಷ್ಕಿ	110/1+2+3+4+ 5/ಕ3	110/1+2+3+4+ 5/ಕ1	110/1+2+3+4+ 5/ಬ	110/1+2+3+4+ 5/ಕ5	0–23	0.27

ಕ್ರಮ ಸಂಖ್ಯೆ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೇ ನಂ.	ತರಹೆ	ಚಕ್ಕುಬಂದಿ				ಜಮೀನಿನ ವಿಸ್ತೀರ್ಣ	ಆಕಾರ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
5	ಶ್ರೀ ಡಾ॥ ನಾಗಪ್ಪ ತಂದೆ ಕೊಟ್ರಪ್ಪ ಕಡ್ಲಿ	ಶ್ರೀ ಡಾ॥ ನಾಗಪ್ಪ ತಂದೆ ಕೊಟ್ರಪ್ಪ ಕಡ್ಲಿ	110/1+2+3+4+5/ಕ3	ಖುಷ್ಕಿ	110/1+2+3+4+5/ಕ4	110/1+2+3+4+5/ಕ2	110/1+2+3+4+5/ಬ	110/1+2+3+4+5/ಕ5	0–35	0–40
6	ಶ್ರೀ ಡಾ॥ ನಾಗಪ್ಪ ತಂದೆ ಕೊಟ್ರಪ್ಪ ಕಡ್ಲಿ	ಶ್ರೀ ಡಾ॥ ನಾಗಪ್ಪ ತಂದೆ ಕೊಟ್ರಪ್ಪ ಕಡ್ಲಿ	110/1+2+3+4+5/ಕ4	ಖುಷ್ಕಿ	110/1+2+3+4+5/ಇ 110/1+2+3+4+5/ಫ	110/1+2+3+4+5/ಕ3	110/1+2+3+4+5/ಬ	110/1+2+3+4+5/ಕ5	0–29	34.00
7	ಶ್ರೀ ಪುರದ ಬಸವರಾಜ ಬಿನ್ ಫಕ್ಕೀರಪ್ಪ ಶ್ರೀ ಪುರದ ಶಿವಾನಂದ ಬಿನ್ ಫಕ್ಕೀರಪ್ಪ ಶ್ರೀ ಪುರದ ಶಂಭುಲಿಂಗ ಬಿನ್ ಫಕ್ಕೀರಪ್ಪ	ಶ್ರೀ ಪುರದ ಬಸವರಾಜ – ಫಕ್ಕೀರಪ್ಪ ಶ್ರೀ ಪುರದ ಶಿವಾನಂದ – ಫಕ್ಕೀರಪ್ಪ ಶ್ರೀ ಪುರದ ಶಂಭುಲಿಂಗ – ಫಕ್ಕೀರಪ್ಪ	110/1+2+3+4+5/ಕ5	ಖುಷ್ಕಿ	110/1+2+3+4+5/ಫ	109	110/1+2+3+4+5/ಕ1, 110/1+2+3+4+5/ಕ2, 110/1+2+3+4+5/ಕ3, 110/1+2+3+4+5/ಕ4.	110/1+2+3+4+5/ಢ	1–20	0.70
8	ಶ್ರೀ ರಣದಿವೆ ಅನಂತಪ್ಪ ಬಿನ್ ಬೊದಪ್ಪ ಶ್ರೀ ರಣದಿವೆ ಬೋದಪ್ಪ – ಅನಂದಪ್ಪ ಶ್ರೀ ರಣದಿವೆ ಅಶೋಕ– ಅನಂದಪ್ಪ	ಶ್ರೀ ರಣದಿವೆ ಅನಂತಪ್ಪ – ಬೊದಪ್ಪ ಶ್ರೀ ರಣದಿವೆ ಬೋದಪ್ಪ– ಆನಂದಪ್ಪ ಶ್ರೀ ರಣದಿವೆ ಅಶೋಕ– ಆನಂದಪ್ಪ	110/1+2+3+4+5/ಡ	ಖುಷ್ಕಿ	110/1+2+3+4+5/ಫ 110/1+2+3+4+5/ಗ	109	110/1+2+3+4+5/ಕ5	54	5–03	2.34
9	ಶ್ರೀ ಪೂಜಾರ ಅಶೋಕ ಬಿನ್ ಯಲ್ಲಪ್ಪ ಶ್ರೀಮತಿ ಪೂಜಾರ ಸಾವಕ್ಕ ಕೋಂ ಅಜ್ಜಪ್ಪ ಶ್ರೀ ಪೂಜಾರ ಜಯಪ್ಪ ಬಿನ್ ಅಜ್ಜಪ್ಪ, ಶ್ರೀ ಪೂಜಾರ ಹನುಮಂತ ಬಿನ್ ಅಜ್ಜಪ್ಪ	ಶ್ರೀ ಪೂಜಾರ ಅಶೋಕ – ಯಲ್ಲಪ್ಪ ಶ್ರೀಮತಿ ಪೂಜಾರ ಸಾವಕ್ಕ – ಅಜ್ಜಪ್ಪ ಶ್ರೀ ಪೂಜಾರ ಜಯಪ್ಪ – ಅಜ್ಜಪ್ಪ, ಶ್ರೀ ಪೂಜಾರ ಹನುಮಂತ – ಅಜ್ಜಪ್ಪ	110/1+2+3+4+5/ಇ	ಖುಷ್ಕಿ	112	110/1+2+3+4+5/ಅ, 110/1+2+3+4+5/ಬ, 110/1+2+3+4+5/ಕ4	ಗ್ರಾಮದ ಗಡಿ	110/1+2+3+4+5/ಫ	5–39	2.26

ಕ್ರಮ ಸಂಖ್ಯೆ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೇ ನಂ.	ತರಹೆ	ಚಕ್ಕುಬಂದಿ				ಜಮೀನಿನ ವಿಸ್ತೀರ್ಣ	ಆಕಾರ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
10	ಶ್ರೀಮತಿ ಪೂಜಾರ ರತ್ನವ್ವ ಕೋಂ ರಮೇಶ ಶ್ರೀ ಪೂಜಾರ ಮಲ್ಲಾರೆಪ್ಪ ಬಿನ್ ರಮೇಶ ಶ್ರೀ ಪೂಜಾರ ಚೆನ್ನಪ್ಪ ಬಿನ್ ಮಲ್ಲಾರೆಪ್ಪ ಶ್ರೀ ಪೂಜಾರ ಮಾರುತಿ ಬಿನ್ ಮಲ್ಲಾರೆಪ್ಪ ಶ್ರೀ ಪೂಜಾರ ಅಶೋಕ ಬಿನ್ ಯಲ್ಲಪ್ಪ ಶ್ರೀಮತಿ ಪೂಜಾರ ಸಾವಕ್ಕ ಕೋಂ ಅಜ್ಜಪ್ಪ ಶ್ರೀ ಪೂಜಾರ ಜಯಪ್ಪ ಬಿನ್ ಅಜ್ಜಪ್ಪ ಶ್ರೀ ಪೂಜಾರ ಹನುಮಂತ ಬಿನ್ ಅಜ್ಜಪ್ಪ	ಶ್ರೀಮತಿ ಪೂಜಾರ ರತ್ನವ್ವ – ರಮೇಶ ಶ್ರೀ ಪೂಜಾರ ಮಲ್ಲಾರೆಪ್ಪ – ರಮೇಶ ಶ್ರೀ ಪೂಜಾರ ಚೆನ್ನಪ್ಪ – ಮಲ್ಲಾರೆಪ್ಪ ಶ್ರೀ ಪೂಜಾರ ಮಾರುತಿ – ಮಲ್ಲಾರೆಪ್ಪ ಶ್ರೀ ಪೂಜಾರ ಅಶೋಕ – ಯಲ್ಲಪ್ಪ ಶ್ರೀಮತಿ ಪೂಜಾರ ಸಾವಕ್ಕ – ಅಜ್ಜಪ್ಪ ಶ್ರೀ ಪೂಜಾರ ಜಯಪ್ಪ – ಅಜ್ಜಪ್ಪ ಶ್ರೀ ಪೂಜಾರ ಹನುಮಂತ – ಅಜ್ಜಪ್ಪ	110/1+2+3+ 4+5/ಫ	ಖುಷ್ಕಿ	112	110/1+2+3+4+ 5/ಕ4, 110/1+2+3+4+ 5/ಕ5, 110/1+2+3+4+ 5/ಡ	110/1+2+3+4+ 5/ಇ	110/1+2+3+4+ 5/ಗ	4–00	1.84
11	ಶ್ರೀ ಶಿದ್ದನಗೌಡ್ರ ಚನಬಸವನಗೌಡ–ಪುಟ್ಟನಗೌಡ ದೇವಗಿರಿ ಶ್ರೀ ಶಿದ್ದನಗೌಡ್ರ ವೀರನಗೌಡ–ಪುಟ್ಟನಗೌಡ ದೇವಗಿರಿ	ಶ್ರೀ ಶಿದ್ದನಗೌಡ್ರ ಚನಬಸವನಗೌಡ–ಪುಟ್ಟನಗೌಡ ದೇವಗಿರಿ ಶ್ರೀ ಶಿದ್ದನಗೌಡ್ರ ವೀರನಗೌಡ–ಪುಟ್ಟನಗೌಡ ದೇವಗಿರಿ	110/1+2+3+ 4+5/ಗ	ಖುಷ್ಕಿ	112	110/1+2+3+ 4+5/ಡ	110/1+2+3+ 4+5/ಫ	54, ಗಾಂವಠಾಣ	4–00	1.84
12	ಶ್ರೀಮತಿ ಕಬ್ಬೂರ ದ್ಯಾಮವ್ವ ಕೋಂ ಬಸವಂಣೆಪ್ಪ ದೇವಗಿರಿ	ಶ್ರೀಮತಿ ಕಬ್ಬೂರ ದ್ಯಾಮವ್ವ ಕೋಂ ಬಸವಂಣೆಪ್ಪ ದೇವಗಿರಿ	112/1	ಖುಷ್ಕಿ	112/2	110	ಗ್ರಾಮದ ಗಡಿ	112/3,112/4	4–00	4.08
13	ಶ್ರೀಮತಿ ಕಬ್ಬೂರು ಸೋಮವ್ವ ಕೋಂ ಕನ್ನಪ್ಪ ಶ್ರೀಮತಿ ಸುಶೀಲಾ ಕೋಂ ಹೇಮನಗೌಡ್ರ ಕೆ.	ಶ್ರೀಮತಿ ಕಬ್ಬೂರು ಸೋಮವ್ವ ಕೋಂ ಕನ್ನಪ್ಪ ಶ್ರೀಮತಿ ಸುಶೀಲಾ ಕೋಂ ಹೇಮನಗೌಡ್ರ ಕೆ.	112/2	ಖುಷ್ಕಿ	113	112/1	ಗ್ರಾಮದ ಗಡಿ	112/4	4–00	4.08

ಕ್ರಮ ಸಂಖ್ಯೆ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೇ ನಂ.	ತರಹೆ	ಚಕ್ಕುಬಂದಿ				ಜಮೀನಿನ ವಿಸ್ತೀರ್ಣ	ಆಕಾರ
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
